**EXAMINATION CODE : 04**

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | | |
|---|---|---|---|---|---|---|---|---|
| | | | | | | | | |

| ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ |
|---|
| 4183337 |

# ಪ್ರಶ್ನೆ ಪತ್ರಿಕೆ ಪುಸ್ತಿಕೆ - ದ್ವಿತೀಯ ಪತ್ರಿಕೆ

(ಪ್ರಶ್ನೆಗಳನ್ನು ಉತ್ತರಿಸುವ ಮೊದಲು ಪ್ರಶ್ನೆ ಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ದಯವಿಟ್ಟು ಓದಿ)

**ವಿಷಯಗಳು : ಇತಿಹಾಸ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ ಮತ್ತು ಪೌರನೀತಿ (ಕಲಾ)**

ಗರಿಷ್ಠ ಅಂಕಗಳು : 100 ಗರಿಷ್ಠ ಅವಧಿ : 2 ಗಂಟೆಗಳು ವಿಷಯ ಸಂಕೇತ : **AA**

**2.00 p.m. to 4.00 p.m.**

(ಓ.ಎಂ.ಆರ್. ಉತ್ತರ ಪತ್ರಿಕೆ ಮುಖಪುಟದಲ್ಲಿ ಕೇಳಿರುವ ವಿವರಗಳನ್ನು ಭರ್ತಿಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ)

## ಅಭ್ಯರ್ಥಿಗಳಿಗೆ ಸೂಚನೆಗಳು

1. 100 ಪ್ರಶ್ನೆಗಳಿರುವ ಮೊಹರಾಗಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯು ಅಡಕಗೊಂಡಿದೆ. ಇದನ್ನು ನಿಮಗೆ ನೀಡಲಾಗಿದೆ.
2. ನಿಮಗೆ ನೀಡಲಾಗಿರುವ ಪ್ರಶ್ನೆ ಪತ್ರಿಕೆಯು ನೀವು ಆಯ್ಕೆಮಾಡಿಕೊಂಡ ವಿಷಯದ ಪತ್ರಿಕೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು.
3. ಪ್ರಶ್ನೆ ಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಬಿಡಿ ಉತ್ತರ ಪತ್ರಿಕೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೇಳಿರುವ ಮಾಹಿತಿಯನ್ನು ಮತ್ತು ಸಂಬಂಧಿಸಿದ ವೃತ್ತಗಳನ್ನು ಅತೀ ಜಾಗರೂಕತೆಯಿಂದ ಕ್ರಮಸಂಖ್ಯೆ 1 ರಿಂದ 8 ರವರೆಗಿನ ಅಂಕಣಗಳಲ್ಲಿ ಭರ್ತಿಮಾಡಿ. ತಪ್ಪಿದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರು.
4. ಪ್ರಶ್ನೆ ಪತ್ರಿಕೆಯ ಪುಸ್ತಿಕೆಯ ಸಂಖ್ಯೆ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯ ಸಂಖ್ಯೆ ಒಂದೇ ಆಗಿದೆಯೇ ಗಮನಿಸಿ. ವ್ಯತ್ಯಾಸ ವಿದ್ದಲ್ಲಿ ತಕ್ಷಣ ಕೊಠಡಿ ಮೇಲ್ವಿಚಾರಕರಿಗೆ ತಿಳಿಸುವುದು.
5. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕ್ರಮಸಂಖ್ಯೆಯನ್ನು ನಿಮಗೆ ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿನ ಕ್ರಮಸಂಖ್ಯೆ 4 ರಲ್ಲಿ ಭರ್ತಿ ಮಾಡಬೇಕು.
6. ನೀವು ಆಯ್ಕೆಮಾಡಿಕೊಂಡಿರುವ ವಿಷಯದ ಸಂಕೇತವನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿನ ಕ್ರಮಸಂಖ್ಯೆ 9 ರಲ್ಲಿ ಭರ್ತಿ ಮಾಡಬೇಕು ಮತ್ತು ವಿಷಯದ ಮುಂದೆ ನೀಡಿರುವ ವೃತ್ತವನ್ನು ತುಂಬಿಸುವುದು.
7. ಪರೀಕ್ಷಾ ಅವಧಿಯಲ್ಲಿ :-
   (ಅ) ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ.
   (ಆ) ಪ್ರತಿ ಪ್ರಶ್ನೆಗೆ ನೀಡಲಾಗಿರುವ ನಾಲ್ಕು ಉತ್ತರಗಳ ಪೈಕಿ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ.
   (ಇ) ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಉದಾಹರಣೆಗೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿನ 20ನೇ ಪ್ರಶ್ನೆಯ ಸರಿ ಉತ್ತರವು ಕ್ರಮಸಂಖ್ಯೆ (3) ಆಗಿದ್ದಲ್ಲಿ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಕ್ರಮಸಂಖ್ಯೆ 20 ರ ಮುಂದೆ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು.

   **20.** ① ② ● ④ (ಇದು ಉದಾಹರಣೆ ಮಾತ್ರ)
8. ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಪುಟಗಳಲ್ಲಿ ಖಾಲಿ ಜಾಗ ಬಿಟ್ಟಿರುವಲ್ಲಿ ಮಾತ್ರ ಉತ್ತರವನ್ನು ಕಂಡು ಹಿಡಿಯುವ ಕಚ್ಚಾ ಕಾರ್ಯವನ್ನು (ರಫ್ ವರ್ಕ್) ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮಾಡತಕ್ಕದ್ದಲ್ಲ.
9. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಿದಲ್ಲಿ ಅಂತಹ ಉತ್ತರಗಳಿಗೆ ಅಂಕಗಳನ್ನು ನೀಡಲು ಬರುವುದಿಲ್ಲ. ಇದರ ಉದಾಹರಣೆಯನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ನೋಡಿ.
10. ಓ.ಎಂ.ಆರ್. ಉತ್ತರಪತ್ರಿಕೆಯ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು. ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು.
11. ಅಭ್ಯರ್ಥಿಗೆ ಉತ್ತರಿಸಲು ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯು ಕಾರ್ಬನ್ ರಹಿತ ಪ್ರತಿಯೊಂದಿಗೆ ಇದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
12. ಪರೀಕ್ಷಾ ಕೊಠಡಿಯೊಳಗೆ ಲಾಗ್‌ಟೇಬಲ್ಸ್ ಕ್ಯಾಲ್ಕ್ಯುಲೇಟರ್, ಪೇಜರ್ ಮತ್ತು ಮೊಬೈಲ್ ದೂರವಾಣಿಯನ್ನು ತರುವುದನ್ನು ನಿಷೇಧಿಸಿದೆ.
13. ಪ್ರಶ್ನೆಗಳನ್ನು ಉತ್ತರಿಸಿದ ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯ ಕ್ರಮಸಂಖ್ಯೆ 8 ರಲ್ಲಿ ಮಾಹಿತಿಯನ್ನು ತುಂಬುವುದು ಕಡ್ಡಾಯ.
14. ವೈಟ್ ಫ್ಲೂಯಿಡ್ ಹಚ್ಚಿ ಉತ್ತರವನ್ನು ಬದಲಾಯಿಸಬಾರದು. ಇಂತಹ ಉತ್ತರಗಳನ್ನು ಮೌಲ್ಯ ಮಾಪನಕ್ಕೆ ಪರಿಗಣಿಸುವುದಿಲ್ಲ.
15. ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಅರ್ಹರಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

### ಓ.ಎಂ.ಆರ್. ಉತ್ತರಪತ್ರಿಕೆ ಭರ್ತಿ ಮಾಡಲು ಸೂಚನೆಗಳು

**(1) ಪ್ರತಿಯೊಂದು ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ. (2) ವೃತ್ತಗಳನ್ನು ನೀಲಿ / ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಉತ್ತರವನ್ನು ತುಂಬಿದ ಮೇಲೆ ಬದಲಿಸಲು ಪ್ರಯತ್ನಿಸಬೇಡಿ. (3) ವೃತ್ತಗಳಲ್ಲಿರುವ ಸಂಖ್ಯೆಗಳು ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬಬೇಕು (4) ಉತ್ತರ ಪತ್ರಿಕೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು ಅಥವಾ ಚುಕ್ಕೆಯಾಗಲೀ ಮಾಡಬಾರದು. (5) ಇದು ಕಾರ್ಬನ್ ರಹಿತ ಉತ್ತರ ಪತ್ರಿಕೆ. ಉತ್ತರ ಪತ್ರಿಕೆಯ ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ತುಂಬುವ ಅಗತ್ಯ ಇಲ್ಲ.**

SEAL



**www.inyatrust.com**

# KANNADA VERSION

**1.** ಬಾಹಮನಿ ಸಾಮ್ರಾಜ್ಯದ ಸ್ಥಾಪಕ ಯಾರು ?

(1) ಮಹಮದ್ ಷಾ II

(2) ಹಸನ್ ಗಂಗೂ ಬಹಮನ್ ಷಾ

(3) ಮಹಮದ್ ಷಾ III

(4) ಮಹಮದ್ ಷಾ I

**2.** ಬಾಹಮನಿಯ ಕಲೆ ಇದಾಗಿತ್ತು

(1) ಸಮಕಾಲೀನ ಕಲೆ (2) ಬಿದರಿ ಕಲೆ

(3) ಕಾಶ್ಮೀರಿ ಕಲೆ (4) ಇಂಡೋ ಕಲೆ

**3.** ಮೊಗಲರ ಸಾಮ್ರಾಜ್ಯವನ್ನು ಮೊದಲ ಬಾರಿಗೆ ಪ್ರಾಂತ್ಯಗಳನ್ನಾಗಿ ವಿಂಗಡಿಸಿದವರು ಯಾರು ?

(1) ಬಾಬರ್

(2) ಹುಮಾಯೂನ್

(3) ಜಹಾಂಗೀರ್

(4) ಅಕ್ಬರ್

**4.** ಕೆಳಗಿನ ವೇದಗಳಲ್ಲಿ ಯಾವುದನ್ನು ಮೊದಲು ರಚಿಸಲಾಯಿತು ?

(1) ಯಜುರ್ವೇದ (2) ಸಾಮವೇದ

(3) ಋಗ್ವೇದ (4) ಅಥರ್ವವೇದ

**5.** ಕೆಳಗಿನ ಯಾವ ಹಿಂದೂ ವಾಸ್ತುಶಿಲ್ಪದಲ್ಲಿ ಇಸ್ಲಾಮಿಕ್ ಶೈಲಿಯ ಪ್ರಭಾವವನ್ನು ಕಾಣಬಹುದು ?

(1) ಲೋಟಸ್ ಮಹಲ್, ವಿಜಯನಗರ

(2) ಸಾವಿರ ಕಂಬಗಳ ಮಂಟಪ, ಮಧುರೈ

(3) ರಾಜನ ಪ್ರೇಕ್ಷಕಗ್ಯಾಲರಿ, ವಿಜಯನಗರ

(4) ಸ್ತಂಭಗಳ ಪ್ರಾಂಗಣ, ರಾಮೇಶ್ವರ

**6.** ಅಲ್ಲಾವುದ್ದೀನ್ ಖಿಲ್ಜಿಯ ಪ್ರಸಿದ್ಧ ದಂಡನಾಯಕ

(1) ಇಲ್ತುಮಿಷ್ (2) ಮಲಿಕ್‌ಕಾಫರ್

(3) ಬಲ್ಬನ್ (4) ಅರಮ್ ಷಾ

**7.** ಮೂರು ಕರ್ನಾಟಿಕ್ ಯುದ್ಧಗಳು ಇವರುಗಳ ನಡುವೆ ಜರುಗಿದವು.

(1) ಬ್ರಿಟಿಷ್ ಮತ್ತು ಫ್ರೆಂಚ್

(2) ಮರಾಠರು ಮತ್ತು ಮುಘಲರು

(3) ಮರಾಠರು ಮತ್ತು ನಿಜಾಮ

(4) ಟಿಪ್ಪುಸುಲ್ತಾನ ಮತ್ತು ಬ್ರಿಟಿಷ್

**8.** ತಾಜ್‌ಮಹಲ್‌ನ ವಾಸ್ತುತಜ್ಞ ಯಾರು ?

(1) ಉಸ್ತಾದ್ ಇಸಾ (2) ಷಹಜಹಾನ್

(3) ಆಸಫ್ ಖಾನ್ (4) ದಾರಾ

**9.** ಶಿವಾಜಿ ಎಲ್ಲಿ ಜನಿಸಿದನು ?

(1) ಶಿವನೇರ ದುರ್ಗ (2) ಪುರಂದರ

(3) ಪುಣೆ (4) ರಾಜ್‌ಘಾಟ್

**10.** ಶಿವಾಜಿಯ ಮಂತ್ರಿ-ಮಂಡಲವನ್ನು ಏನೆಂದು ಕರೆಯುತ್ತಿದ್ದರು ?

(1) ಮಂತ್ರಿ ಮಂಡಲ (2) ಮಂತ್ರಿ ಪರಿಷತ್

(3) ಅಷ್ಟಪ್ರಧಾನರು (4) ಅಠಾರ ಕಛೇರಿ

**11.** ವೇದಗಳ ಕಾಲದ ಬುಡಕಟ್ಟು ಸಭೆಗಳು

(1) ಸಭಾ ಮತ್ತು ಸಮಿತಿ

(2) ಸಭಾ ಮತ್ತು ವಿದಥ

(3) ಸಮಿತಿ ಮತ್ತು ಗಣ

(4) ವಿದಥ ಮತ್ತು ಗಣ



www.inyatrust.com

ಟಿಪ್ಪಣಿ



12. ತಿರುಮಲರಾವ್ ಯಾರ ಅಧೀನದಲ್ಲಿ ಉನ್ನತ ಹುದ್ದೆ ಹೊಂದಿದ್ದರು ?
(1) ಟಿಪ್ಪು ಸುಲ್ತಾನ್
(2) ಹೈದರಾಲಿ
(3) ರಾಣಿ ಲಕ್ಷ್ಮಮ್ಮಣ್ಣಿ
(4) ರಾಜ ಒಡೆಯರ್

13. ಮೊದಲ ಆಂಗ್ಲೋ-ಮೈಸೂರು ಯುದ್ಧದಲ್ಲಿ ಹೈದರಾಲಿ ವಶಪಡಿಸಿಕೊಂಡಿದ್ದು
(1) ಮಂಗಳೂರು (2) ಮದ್ರಾಸ್
(3) ಹೈದರಾಬಾದ್ (4) ಕಲ್ಕತ್ತಾ

14. 1940 ರಲ್ಲಿ ಕಾಂಗ್ರೆಸ್ ಬ್ರಿಟಿಷರ ವಿರುದ್ಧ ಯಾವ ರೀತಿಯಾದ ಹೋರಾಟದ ಸಂಘಟನೆ ಮಾಡಿತು ?
(1) ಅಸಹಕಾರ
(2) ವೈಯಕ್ತಿಕ ಸತ್ಯಾಗ್ರಹ
(3) ಕಾನೂನುಭಂಗ ಚಳುವಳಿ
(4) ಸಶಸ್ತ್ರ ಹೋರಾಟ

15. ಮಹಾತ್ಮ ಗಾಂಧೀಜಿಯವರು ಯಾರ ಪ್ರಭಾವಕ್ಕೆ ಒಳಗಾಗಿದ್ದರು ?
(1) ಲಿಯೊ ಟಾಲ್‌ಸ್ಟಾಯ್
(2) ಬರ್ನಾರ್ಡ್‌ಷಾ
(3) ಕಾರ್ಲ್‌ಮಾರ್ಕ್ಸ್
(4) ಲೆನಿನ್

16. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ
(1) 1600 (2) 1602
(3) 1609 (4) 1623

17. ಅಮೇರಿಕಾ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದು ಜೂನ್ 4
(1) 1776 (2) 1775
(3) 1774 (4) 1773

18. ಫ್ರೆಂಚ್ ಕ್ರಾಂತಿ ನಡೆದ ವರ್ಷ ?
(1) 1793 (2) 1794
(3) 1789 (4) 1795

19. ರಷ್ಯಾ ಕ್ರಾಂತಿ ಸಂಭವಿಸಿದ ವರ್ಷ ?
(1) 1917 (2) 1918
(3) 1919 (4) 1920

20. ಝಾರ್ ದೊರೆಗಳ ಸರ್ವಾಧಿಕಾರ ಯಾವುದರೊಂದಿಗೆ ಕೊನೆಗೊಂಡಿತು ?
(1) ಫ್ರೆಂಚ್ ಕ್ರಾಂತಿ
(2) ರಷ್ಯಾ ಕ್ರಾಂತಿ
(3) ಅಮೇರಿಕಾ ಕ್ರಾಂತಿ
(4) ಜರ್ಮನಿ ವಶೀಕರಣ

21. ಮೊದಲ ಮಹಾಯುದ್ಧ ಆರಂಭವಾದ ವರ್ಷ ?
(1) 1918 (2) 1914
(3) 1919 (4) 1920

22. ಕೆಳಗಿನವರಲ್ಲಿ 'ಪಾಕಿಸ್ತಾನ' ಎಂಬ ಪದವನ್ನು ಹುಟ್ಟುಹಾಕಿದವರು ಯಾರು ?
(1) ಸರ್ ಮಹಮದ್ ಇಕ್ಬಾಲ್
(2) ರಹಮತ್ ಅಲಿ
(3) ಮಹಮದ್ ಅಲಿ ಜಿನ್ನಾ
(4) ಸರ್ ಸಯ್ಯದ್ ಅಹಮದ್ ಖಾನ್



www.inyatrust.com

23. ಪ್ಲಾಸಿ ಕದನ ಜರುಗಿದ್ದು

(1) 1753 (2) 1752
(3) 1757 (4) 1764

24. ಬಕ್ಸಾರ್‌ಕದನ ಸಂಭವಿಸಿದ್ದು

(1) 1764 (2) 1757
(3) 1762 (4) 1766

25. ಈ ಕೆಳಕಂಡ ನಾಯಕರುಗಳಲ್ಲಿ ಯಾರು ತೀವ್ರಗಾಮಿಗಳ ಸಂಪರ್ಕದಲ್ಲಿ ಇರಲಿಲ್ಲ ?

(1) ಬಾಲ ಗಂಗಾಧರ ತಿಲಕ್
(2) ಅರಬಿಂದೊ ಘೋಷ್
(3) ಬಿಪಿನ್‌ಚಂದ್ರ ಪಾಲ್
(4) ಲಾಲಾ ಲಜಪತ್‌ರಾಯ್

26. ದ್ವಿರಾಷ್ಟ್ರ ಸಿದ್ಧಾಂತವನ್ನು ನೀಡಿದ್ದು

(1) ಜವಾಹರ್‌ಲಾಲ್ ನೆಹರೂ
(2) ಮಹಮದ್ ಅಲಿ ಜಿನ್ನಾ
(3) ಗಾಂಧೀಜಿ
(4) ಬ್ರಿಟಿಷರು

27. 'ನವಕೋಟಿ ನಾರಾಯಣ' ಎಂದು ಬಿರುದಾಂಕಿತ-ರಾದವರು

(1) ರಾಜ ಒಡೆಯರ್
(2) ಕಂಠೀರವ ನರಸರಾಜ ಒಡೆಯರ್
(3) ನರಸಿಂಹ ರಾಜ ಒಡೆಯರ್
(4) ಚಿಕ್ಕದೇವರಾಜ ಒಡೆಯರ್

28. ಯುರೋಪಿನಲ್ಲಿ 2ನೇ ಮಹಾಯುದ್ಧ ಸಂಭವಿಸಿದ ವರ್ಷ ?

(1) 1939 (2) 1938
(3) 1945 (4) 1946

29. ಕಾನ್ಪುರದಲ್ಲಿ ನಡೆದ 1857ರ ದಂಗೆಯ ನೇತೃತ್ವ ವಹಿಸಿದವರು

(1) ನಾನಾ ಸಾಹೇಬ್
(2) ತಾಂತ್ಯ ಟೋಪಿ
(3) ಬಖ್ತಖಾನ್
(4) ಜೀನತ್ ಮಹಲ್

30. ಶೀತಲ ಸಮರದಲ್ಲಿ ಪ್ರಮುಖ ಪಾತ್ರವಹಿಸಿದ ರಾಷ್ಟ್ರಗಳು

(1) ರಷ್ಯಾ ಮತ್ತು ಇಂಗ್ಲೆಂಡ್
(2) ರಷ್ಯಾ ಮತ್ತು ಯು ಎಸ್ ಎ
(3) ರಷ್ಯಾ ಮತ್ತು ಫ್ರಾನ್ಸ್
(4) ರಷ್ಯಾ ಮತ್ತು ಜರ್ಮನಿ

31. ಭಾರತದಲ್ಲಿ ಫೆಡರಲ್ ನ್ಯಾಯಾಲಯ ಯಾವ-ಕಾಯ್ದೆಗೆ ಅನುಸಾರವಾಗಿ ಸ್ಥಾಪನೆಯಾಯಿತು ?

(1) 1891 (2) 1909
(3) 1919 (4) 1935

32. ಮುಸ್ಲಿಂರಿಗೆ ಪ್ರತ್ಯೇಕ ಮತದಾನವನ್ನು ಯಾವ ಕಾಯ್ದೆಯಲ್ಲಿ ಪರಿಚಯಿಸಲಾಯಿತು ?

(1) 1901 ರ ಕಾಯ್ದೆ
(2) 1909 ರ ಕಾಯ್ದೆ
(3) 1905 ರ ಕಾಯ್ದೆ
(4) 1904 ರ ಕಾಯ್ದೆ

33. 1857 ರ ದಂಗೆಯನ್ನು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದವರು ಯಾರು ?

(1) S.N. ಸೇನ್
(2) R.C. ಮಜುಂದಾರ್
(3) ಬಾಲಗಂಗಾಧರ ತಿಲಕ್
(4) V.D. ಸಾವರ್ಕರ್



www.inyatrust.com

**34.** 'ಭಾರತದ ನೆಪೋಲಿಯನ್'ಎಂದು ಯಾರನ್ನು ಕರೆಯುತ್ತಾರೆ ?

(1) ಚಂದ್ರಗುಪ್ತ (2) ಸ್ಕಂದಗುಪ್ತ

(3) ಸಮುದ್ರಗುಪ್ತ (4) ಚಂದ್ರಗುಪ್ತ II

**35.** 15ನೇ ಶತಮಾನದಲ್ಲಿ ಭಾರತದಲ್ಲಿ ಜರುಗಿದ ಸಾಮಾಜಿಕ ಸುಧಾರಣಾ ಚಳುವಳಿಯ ಮುಖ್ಯ ಉದ್ದೇಶ

(1) ಧಾರ್ಮಿಕ ಜೀವನ ಸುಧಾರಣೆ

(2) ಸಾಮಾಜಿಕ ಪಿಡುಗುಗಳ ನಿರ್ಮೂಲನೆ

(3) ಶಿಕ್ಷಣದ ಪ್ರಸಾರ

(4) ಹಿಂದೂ ಸಮಾಜದ ಬಲಪಡಿಸುವಿಕೆ

**36.** ಈ ಕೆಳಕಂಡ ಯಾವ ನಾಯಕರಿಗೆ ಪ್ರೊಟೆಸ್ಟೆಂಟ್ ಸುಧಾರಣಾ ಚಳುವಳಿಯು ಇತಿಹಾಸದಲ್ಲಿ ಖ್ಯಾತಿಯನ್ನು ತಂದುಕೊಟ್ಟಿತು ?

(1) ಇಗ್ನೇಶಿಯಸ್ ಲಾಯೋಲಾ

(2) ಮಾರ್ಟಿನ್ ಲೂಥರ್ ಕಿಂಗ್

(3) ಮಾರ್ಟಿನ್ ಲೂಥರ್

(4) ನೆಲ್ಸನ್ ಮಂಡೆಲಾ

**37.** 1858ರ ರಾಣಿಯ ಘೋಷಣೆಯನ್ನು ಹೀಗೆಂದು ಕರೆಯುತ್ತಾರೆ

(1) ಮ್ಯಾಗ್ನಕಾರ್ಟ (2) ಮ್ಯಾಗ್ನ ಚರಿತ್ರೆ

(3) ಮ್ಯಾಗ್ನ ಚಕ್ರ (4) ಮ್ಯಾಗ್ನ ಪತ್ರ

**38.** ಈ ಕೆಳಗಿನ ಯಾವ ದೇಶ ಭೌಗೋಳಿಕ ಅನ್ವೇಷಣೆಯಲ್ಲಿ ಪ್ರಭುತ್ವವನ್ನು ಸಾಧಿಸಿತು ?

(1) ಇಂಡಿಯಾ

(2) ಅಮೇರಿಕಾ

(3) ಚೀನಾ

(4) ಪೋರ್ಚುಗಲ್

**39.** ಯಾವ ದೇಶವನ್ನು 'ಪುನರುಜ್ಜೀವನದ ತವರುಮನೆ' ಎನ್ನುತ್ತಾರೆ ?

(1) ರೋಮ್ (2) ಇಟಲಿ

(3) ಜರ್ಮನಿ (4) ಫ್ರಾನ್ಸ್

**40.** ಯಾವ ರಾಜಪುತ್ ರಾಜ್ಯ ಔರಂಗಜೇಬ್‌ನ ಮರಣದ ವರೆಗೂ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಿತು ?

(1) ಮಾರವಾಡ

(2) ಮೇವಾರ

(3) ಜೈಪುರ

(4) ಬಿಕನೇರ

**41.** ಕ್ರಿಶ್ಚಿಯನ್ನರ ಪವಿತ್ರಗ್ರಂಥ ಬೈಬಲ್ ಇವುಗಳನ್ನು ಒಳಗೊಂಡಿದೆ :

(1) 10 ಕಮಾಂಡ್‌ಮೆಂಟ್‌ಗಳು

(2) 7 ಕಮಾಂಡ್‌ಮೆಂಟ್‌ಗಳು

(3) 8 ಕಮಾಂಡ್‌ಮೆಂಟ್‌ಗಳು

(4) 6 ಕಮಾಂಡ್‌ಮೆಂಟ್‌ಗಳು



www.inyatrust.com

42. ಇಕ್ತಾದಾರರನ್ನು ದೆಹಲಿ ಸುಲ್ತಾನರ ಕಾಲದಲ್ಲಿ ಈ ರೀತಿಯಾಗಿಯೂ ಕರೆಯುತ್ತಿದ್ದರು.

(1) ಮಲ್ಲಿಕ್ (2) ಷೇಕ್
(3) ಮುಖ್ತಿ (4) ಮುನ್ಷಿನ್

43. ಉತ್ತರ ಭಾರತದ ಮೊಟ್ಟ ಮೊದಲ ಪ್ರಸಿದ್ಧ ಭಕ್ತಿಸಂತ ಯಾರು ?

(1) ರಾಮಾನಂದ (2) ಕಬೀರ್
(3) ಗುರುನಾನಕ್ (4) ಚೈತನ್ಯ

44. 'ದಾಸಬೋಧ'ದ ಕರ್ತೃ ಯಾರು ?

(1) ಜ್ಞಾನೇಶ್ವರ (2) ನಾಮದೇವ
(3) ತುಕಾರಾಮ್ (4) ರಾಮ್‌ದಾಸ್

45. 'ಮೊಹೆಂಜೊದಾರೊ' ಪದದ ಅರ್ಥವೇನು ?

(1) ಬದುಕಿರುವವರ ದಿಬ್ಬ
(2) ಏರುವವರ ದಿಬ್ಬ
(3) ಶ್ರೇಷ್ಠರ ದಿಬ್ಬ
(4) ಸತ್ತವರ ದಿಬ್ಬ

46. 'ತಹಕೀಕ್-ಇ-ಹಿಂದ್' (ಭಾರತದ ವಾಸ್ತವಿಕತೆ) ಕೃತಿಯನ್ನು ಬರೆದವರಾರು ?

(1) ಇಬ್ನ್ ಬಟೂಟ
(2) ಆಲ್ಬೆರೂನಿ
(3) ಝಿಯಾವುದ್ದೀನ್ ಬರಾನಿ
(4) ಫೆರಿಸ್ತಾ

47. ಅಲಹಾಬಾದ್ ಶಾಸನದ ಕರ್ತೃ ಯಾರು ?

(1) ವರಾಹಮಿಹಿರ (2) ಬ್ರಹ್ಮಗುಪ್ತ
(3) ಹರಿಸೇನ (4) ಆರ್ಯಭಟ್ಟ

48. ಮೌರ್ಯರ ಯಾವ ದೊರೆ ತನ್ನ ಕೊನೆಯ ದಿನಗಳಲ್ಲಿ ಸಿಂಹಾಸನ ತ್ಯಜಿಸಿ ಜೈನ ಸಂನ್ಯಾಸಿ ಭದ್ರಬಾಹುವಿನೊಡನೆ ದಕ್ಷಿಣಭಾರತಕ್ಕೆ ಬಂದನು ?

(1) ಚಂದ್ರಗುಪ್ತ ಮೌರ್ಯ
(2) ಬಿಂದುಸಾರ
(3) ದಶರಥ
(4) ಸಂಪ್ರತಿ

49. ಬಾಹಮನಿ ಸಾಮ್ರಾಜ್ಯ ಮತ್ತು ವಿಜಯನಗರ ಸಾಮ್ರಾಜ್ಯಗಳ ನಡುವೆ ಆಗಾಗ್ಗೆ ಯಾವ ಪ್ರದೇಶಕ್ಕಾಗಿ ಘರ್ಷಣೆ ನಡೆಯುತ್ತಿತ್ತು ?

(1) ಮಧುರೈ
(2) ವಾರಂಗಲ್
(3) ಮಲಬಾರ್
(4) ರಾಯಚೂರು ದೋ-ಅಬ್

50. ಅಶೋಕನ ಯಾವ ಶಾಸನದಲ್ಲಿ ಆತನ ಪೂರ್ಣ ಹೆಸರನ್ನು ಗುರ್ತಿಸಬಹುದು ?

(1) ಮಸ್ಕಿ ಶಾಸನ
(2) ಮನ್ಸೇರ ಶಿಲಾಶಾಸನ
(3) ಸಾರನಾಥ ಸ್ತಂಭ ಶಾಸನ
(4) ಎರ್ರಾಗುಡಿ ಶಿಲಾಶಾಸನ



www.inyatrust.com

**51.** ಉಷ್ಣ ವಲಯದ ಆರ್ದ್ರತೆಯ ಕಾಡುಗಳ ಪ್ರದೇಶಕ್ಕೆ ಹೊರತಾದ ಒಂದು ಹೇಳಿಕೆ ಯಾವುದೆಂದರೆ ?

(1) ಎತ್ತರವಾದ ಮರಗಳು ಮತ್ತು ಅವುಗಳ ಮೇಲೆ ಬೆಳೆದ ಸಸ್ಯಗಳು

(2) ಮರಗಳ ಮೇಲೆ ಚಪ್ಪರದಂತೆ ಬೆಳೆದ ಬಳ್ಳಿಗಳು.

(3) ಈ ಕಾಡಿನಲ್ಲಿ ಮರ-ಸಸ್ಯಗಳ ಉಪಸ್ತರಗಳು.

(4) ಚಳಿಗಾಲಕ್ಕೆ ಮುನ್ನ ಎಲೆ ಉದುರಿಸುವ ಮರಗಳು.

**52.** ಈ ಕೆಳಗಿನವುಗಳಲ್ಲಿ ಯಾವುದು ಮರುಭೂಮಿಯ ಭಾಗಗಳಿಗೆ ಸೇರಿರದ ಅಂಶವಾಗಿದೆ ?

(1) ಬಿಲಗಳಲ್ಲಿ ವಾಸಿಸುವ ಚಿಕ್ಕ ಪ್ರಾಣಿಸಂಕುಲಗಳು

(2) ಸಾಮಾನ್ಯವಾಗಿ ಬಹು ಸಂಖ್ಯೆಯಲ್ಲಿ ವಲಸೆ ಹೋಗುವ ಪ್ರಾಣಿಗಳು.

(3) ರಾತ್ರಿವೇಳೆಯಲ್ಲಿ ಬೇಟೆಯಾಡುವ ಜೀವಿಸಂಕುಲಗಳು.

(4) ವ್ಯವಸಾಯ ಕ್ಷೇತ್ರಗಳಲ್ಲಿ ಚವುಳು ಭೂಮಿಯಾಗುವಿಕೆಯ ಸಮಸ್ಯೆ

**53.** ಮೆಡಿಟರೇನಿಯನ್ ವಾಯುಗುಣಪ್ರದೇಶದಲ್ಲಿ ಮಿಸ್ಟ್ರಲ್ ಮತ್ತು ಬೋರ ಬಗೆಯ ಸ್ಥಳೀಯ ಗಾಳಿಗಳು ಮುಖ್ಯವಾಗಿ ಬೀಸುವುದು

(1) ಪೂರ್ವದಿಂದ ಪಶ್ಚಿಮಕ್ಕೆ

(2) ದಕ್ಷಿಣದಿಂದ ಉತ್ತರಕ್ಕೆ

(3) ಉತ್ತರದಿಂದ ದಕ್ಷಿಣಕ್ಕೆ

(4) ಪಶ್ಚಿಮದಿಂದ ಪೂರ್ವಕ್ಕೆ

**54.** ಈ ಕೆಳಗಿನವುಗಳಲ್ಲಿ ಯಾವುದು ಪುನರ್‌ಬಳಕೆಗೆ ಬರಬಲ್ಲ ಸಂಪನ್ಮೂಲಗಳಿಗೆ ಹೊರತಾದುದು ?

(1) ಗಾಳಿಯ ಗಿರಣಿಗಳು ಮತ್ತು ಸಾಗರ ನೀರಿನ ಅಲೆಗಳು

(2) ಜೈವಿಕ ಅನಿಲ ಮತ್ತು ಜೈವಿಕ ತ್ಯಾಜ್ಯ ವಸ್ತುಗಳು

(3) ಭೂ ಔಷ್ಣೀಯ ಶಕ್ತಿ ಮತ್ತು ಜಲ ಶಕ್ತಿ

(4) ಔಷ್ಣೀಯ ಶಕ್ತಿ ಮತ್ತು ಅಣು ಶಕ್ತಿ

**55.** ಸಮಶೀತೋಷ್ಣ ವಲಯದ ಕಾಡುಗಳಿಗೆ <u>ಹೊರತಾದ</u> ಎರಡು ಸಸ್ಯಗಳೆಂದರೆ ?

(1) ಮ್ಯಾಪಲ್ ಮತ್ತು ಬಿರ್ಚ್

(2) ಐವರಿ ಮತ್ತು ಎಬೋನಿ ಮರಗಳು

(3) ಸಿಡಾರ್ ಮತ್ತು ಹೆಮ್‌ಲಾಕ್

(4) ಪೈನ್ ಮತ್ತು ಸ್ಪ್ರೂಸ್

**56.** ಯಾವ ಗುಂಪಿನ ರಾಷ್ಟ್ರಗಳಲ್ಲಿ ಅವುಗಳ ಕಾರ್ಮಿಕರಲ್ಲಿ ಶೇ. 20 ರಷ್ಟು ಕೈಗಾರಿಕಾಕ್ಷೇತ್ರದಲ್ಲಿ ಮತ್ತು ಶೇ. 50 ಕ್ಕೂ ಮಿಗಿಲಾಗಿ ಸೇವಾ ಕ್ಷೇತ್ರಗಳಲ್ಲಿ ನಿರತರಾಗಿದ್ದಾರೆ ?

(1) ರಷ್ಯಾ-ಚೀನಾ ಮತ್ತು ಭಾರತ

(2) ಯು ಎಸ್ ಎ-ಮೆಕ್ಸಿಕೊ ಮತ್ತು ಘಾನ

(3) ಫ್ರಾನ್ಸ್-ಇರಾನ್ ಮತ್ತು ಟರ್ಕಿ

(4) ಯು ಎಸ್ ಎ-ರಷ್ಯಾ ಮತ್ತು ಫ್ರಾನ್ಸ್

**57.** ಯಾವೆರಡು ಗಿರಿಜನ ಗುಂಪುಗಳು ಗಣಿಗಾರಿಕೆ--ಗಳಿಂದಾಗಿ ಅತೀವ ಪರಿಣಾಮಕ್ಕೊಳಗಾಗಿವೆ ?

(1) ಯಾಕುಟ್ಸ್ ಮತ್ತು ಎಸ್ಕಿಮೋಗಳು

(2) ಅಬಾರಿಜಿನ್ಸ್ ಮತ್ತು ರೆಡ್ ಇಂಡಿಯನ್ನರು

(3) ಟೌರೆಗ್ಸ್ ಮತ್ತು ಬಿಡೂಯಿನ್ನರು

(4) ತೋಡರು ಮತ್ತು ಸೋಲಿಗರು

**58.** ಮಾನ್‌ಸೂನ್ ವಾಯುಗುಣದಲ್ಲಿ 'ಸಮಭಾಜಕ ಉಷ್ಣತಾ ನಿಮ್ನತೆಯು' ಹಿಮಾಲಯ ಪರ್ವತ ಪ್ರದೇಶವನ್ನು ತಲುಪುವುದು ಯಾವಾಗಲೆಂದರೆ ?

(1) ಜನವರಿ ತಿಂಗಳ ಮಧ್ಯದಲ್ಲಿ

(2) ಮಾರ್ಚ್ ತಿಂಗಳ ಮಧ್ಯದಲ್ಲಿ

(3) ಜುಲೈ ತಿಂಗಳ ಮಧ್ಯದಲ್ಲಿ

(4) ಡಿಸೆಂಬರ್ ತಿಂಗಳ ಮಧ್ಯದಲ್ಲಿ



www.inyatrust.com

**59.** ಭಾರತದ ಪ್ರಮುಖ ಕೈಗಾರಿಕಾ ವಲಯವಾದ ಉತ್ತರ ಕೈಗಾರಿಕಾವಲಯದಲ್ಲಿ ಕ್ರಮವಾಗಿ ಉತ್ತರದಿಂದ ದಕ್ಷಿಣಕ್ಕೆ ಕಾಣಬರುವ ಸರಿಯಾದ ಕೈಗಾರಿಕಾಪಟ್ಟಣಗಳಾವುವೆಂದರೆ ?

(1) ದೆಹಲಿ – ಪಾಣೀಪತ್ – ಕಾನ್ಪುರ – ಮಿರ್ಜಾಪುರ

(2) ಪಾಣೀಪತ್ – ದೆಹಲಿ – ಕಾನ್ಪುರ – ಮಿರ್ಜಾಪುರ

(3) ಪಾಣೀಪತ್ – ದೆಹಲಿ – ಮಿರ್ಜಾಪುರ – ಕಾನ್ಪುರ

(4) ಮಿರ್ಜಾಪುರ – ಪಾಣೀಪತ್ – ದೆಹಲಿ – ಕಾನ್ಪುರ

**60.** ಈ ಕೆಳಗಿನ ಯಾವ ದೇಶಗಳ ತೀರ ಪ್ರದೇಶಗಳು ದಕ್ಷಿಣ ಚೀನಾಸಮುದ್ರದ ಬಹುತೇಕ ಭಾಗಗಳಾಗಿ ಕಾಣಬರುತ್ತವೆ ?

(1) ಚೀನಾ – ತೈವಾನ್ – ಮಲೇಶಿಯ

(2) ಚೀನಾ – ಫಿಲಿಪ್ಪೈನ್ಸ್ – ಕಾಂಬೋಡಿಯ

(3) ಬೋರ್ನಿಯ – ಮಲೇಶಿಯ – ಐರಿಯನ್ ಜಯ

(4) ವಿಯತ್‌ನಾಮ್ – ಫಿಲಿಪ್ಪೈನ್ಸ್ – ಸಾರವಾಕ್

**61.** ಆಫ್ರಿಕಾದಲ್ಲಿ ಎರಡು ಸರೋವರಗಳು ವೈಟ್ ನೈಲ್ ನದಿಯ ಉಗಮಕ್ಕೆ ಸಂಬಂಧಿಸಿವೆ, ಅವುಗಳೆಂದರೆ

(1) ಟರ್ಕನಾ ಸರೋವರ ಮತ್ತು ಮವೇರು

(2) ಟಾಂಗಾನಿಕ ಸರೋವರ ಮತ್ತು ನ್ಯಾಸಾ ಸರೋವರ

(3) ಆಲ್ಬರ್ಟ ಸರೋವರ ಮತ್ತು ಕ್ವಯೋಗ ಸರೋವರ

(4) ಛಾಡ್ ಸರೋವರ ಮತ್ತು ವಿಕ್ಟೋರಿಯ ಸರೋವರ

**62.** ಭಾರತದಲ್ಲಿ ರೋಹಿಲ್‌ಖಂಡದ ಮೈದಾನ ಪ್ರದೇಶವು ಕಂಡುಬರುವುದು ಯಾವಕಡೆಗೆಂದರೆ ?

(1) ಉತ್ತರಾಖಂಡದ ಪಶ್ಚಿಮಕ್ಕೆ

(2) ಉತ್ತರಾಖಂಡದ ಪೂರ್ವಕ್ಕೆ

(3) ಉತ್ತರಾಖಂಡದ ದಕ್ಷಿಣಕ್ಕೆ

(4) ಬಿಹಾರದ ದಕ್ಷಿಣಕ್ಕೆ

**63.** ಕಾಂಪಾಸ್ ಮತ್ತು ಪಾಂಪಾಸ್ ಹುಲ್ಲುಗಾವಲುಗಳ ಬಹುತೇಕ ಕ್ಷೇತ್ರವು ಕ್ರಮವಾಗಿ ಕಂಡುಬರುವ ದೇಶಗಳಾವುವೆಂದರೆ ?

(1) ಪರಾಗ್ವೆ ಮತ್ತು ಉರುಗ್ವೆ

(2) ಬ್ರಜಿಲ್ ಮತ್ತು ಅರ್ಜೆಂಟೈನಾ

(3) ವೆನೆಜುವೇಲಾ ಮತ್ತು ಬ್ರಜಿಲ್

(4) ಚಿಲಿ ಮತ್ತು ಅರ್ಜೆಂಟೈನಾ

**64.** ಆಸ್ಟ್ರೇಲಿಯಾದ ಪ್ರಮುಖ ಮೂರು ಪ್ರಾಂತ್ಯಗಳಲ್ಲಿ ಬಹುವಾಗಿ ಕಲ್ಲಿದ್ದಲಿನ ಗಣಿಗಳಿವೆ, ಅವುಗಳೆಂದರೆ ?

(1) ಪಶ್ಚಿಮ ಆಸ್ಟ್ರೇಲಿಯ-ಉತ್ತರ ಪ್ರಾಂತ್ಯ ಮತ್ತು ವಿಕ್ಟೋರಿಯ

(2) ದಕ್ಷಿಣ ಆಸ್ಟ್ರೇಲಿಯ-ಪಶ್ಚಿಮ ಆಸ್ಟ್ರೇಲಿಯ-ಟಾಸ್ಮಾನಿಯ

(3) ಕ್ವೀನ್ಸ್‌ಲ್ಯಾಂಡ್-ಸೌತ್ ವೇಲ್ಸ್ ಮತ್ತು ವಿಕ್ಟೋರಿಯ

(4) ಉತ್ತರ ಪ್ರಾಂತ್ಯ - ದಕ್ಷಿಣ ಆಸ್ಟ್ರೇಲಿಯ ಮತ್ತು ವಿಕ್ಟೋರಿಯ

**65.** ಅಂಟಾರ್ಕ್ಟಿಕಾದಲ್ಲಿ ದಕ್ಷಿಣ ಆಯಸ್ಕಾಂತೀಯ ಧ್ರುವವು ಆಸ್ಟ್ರೇಲಿಯದ ಕಡೆಗೆ ಕಂಡುಬರುವುದು, ಅದರ ರೇಖಾಂಶಗಳಾವುವೆಂದರೆ ?

(1) 120° ಯಿಂದ 130° ಪೂರ್ವ

(2) 140° ಯಿಂದ 150° ಪೂರ್ವ

(3) 150° ಯಿಂದ 160° ಪೂರ್ವ

(4) 170° ಯಿಂದ 180° ಪೂರ್ವ

**66.** ಈ ಕೆಳಗಿನ ಯಾವೆರಡು ಮಿಸ್ಸಿಸ್ಸಿಪ್ಪಿನದಿಯ ಪಶ್ಚಿಮ ಕಡೆಯ ಉಪನದಿಗಳಾಗಿ ಕಂಡುಬರುತ್ತವೆ ?

(1) ಕೊಲಂಬಿಯಾ ನದಿ ಮತ್ತು ಸ್ನೇಕ್ ನದಿ

(2) ಕೊಲರಾಡೋ ನದಿ ಮತ್ತು ರಯೋಗ್ರಾಂಡ್ ನದಿ

(3) ಟೆನ್ನೆಸ್ಸೀ ನದಿ ಮತ್ತು ಓಹಿಯೊ ನದಿ

(4) ಅರೆಕಾನ್ಸಸ್ ನದಿ ಮತ್ತು ರೆಡ್ ನದಿ



www.inyatrust.com

67. ಭೂ ವಾಯು ಮಂಡಲದ ಪದರಗಳಲ್ಲಿ 'ಸಮೋಷ್ಣವಲಯ' ಪದರವಾವುದೆಂದರೆ ?
(1) ಐಯನೋಸ್ಫಿಯರ್ (2) ಎಕ್ಸೋಸ್ಫಿಯರ್
(3) ಸ್ಟ್ರಾಟೋಸ್ಫಿಯರ್ (4) ಟ್ರೋಪೋಸ್ಫಿಯರ್

68. ಭೂಗೋಳ ಶಾಸ್ತ್ರದ ಯಾವೆರಡು ಉಪ ಶಾಖೆಗಳು ಭೌತಿಕ ಭೂಗೋಳ ಶಾಸ್ತ್ರದ ಭಾಗಗಳೆಂದು ಪರಿಗಣಿಸಲಾಗಿದೆ ?
(1) ಕೃಷಿ ಮತ್ತು ಪಟ್ಟಣ ಭೂಗೋಳ ಶಾಸ್ತ್ರ ಗಳು
(2) ಪ್ರಾದೇಶಿಕ ಮತ್ತು ಹವಾಮಾನ ಶಾಸ್ತ್ರ ಗಳು
(3) ವಸತಿ ಭೂಗೋಳಶಾಸ್ತ್ರ ಮತ್ತು ಜೀವ ಭೂಗೋಳಶಾಸ್ತ್ರಗಳು
(4) ಮಣ್ಣಿನ ಶಾಸ್ತ್ರ ಮತ್ತು ಸಾಗರ ಶಾಸ್ತ್ರಗಳು

69. ಭೂ ಅಂತರಿಕಸ್ತರಗಳಲ್ಲಿ ಒಂದು 'ಕಡಿಮೆ ಹರಿಯುವಿಕೆ' ಮತ್ತು 'ಕಡಿಮೆ ವೇಗ' ಮುಂತಾದ ಗುಣಲಕ್ಷಣಗಳನ್ನು ಹೊಂದಿದೆ, ಅದಾವುದೆಂದರೆ ?
(1) ಹೊರಕವಚದ ಅತಿಮೇಲ್ಭಾಗ
(2) ಹೊರಕವಚದ ಮಧ್ಯಭಾಗ
(3) ಮ್ಯಾಂಟಲ್‌ನ ಅತಿ ಮೇಲ್ಭಾಗ
(4) ಮ್ಯಾಂಟಲ್ ಕೆಳಭಾಗ

70. ವಿಶ್ವದ ಉಗಮದ ಬಗೆಗೆ ಸಿದ್ಧಾಂತವನ್ನು ಮಂಡಿಸಿದ ಇಬ್ಬರು ವಿಜ್ಞಾನಿಗಳೆಂದರೆ
(1) ಲಾಪ್ಲೇಸ್ ಮತ್ತು ಆ್ಯಬೆಲೆಮಾಯಿಟ್ರೆ
(2) ಥಾಮಸ್ ಗೋಲ್ಡ್ ಮತ್ತು ಫ್ರೆಡ್‌ಹಾಯ್ಲ್
(3) ಹರ್‌ಮನ್ ಬೊಂಡಿ ಮತ್ತು ಲೈಟ್ಲಟನ್
(4) ಚೇಂಬರ್ಲೇನ್ ಮತ್ತು ಮೌಲ್ಟನ್

71. ಅಮೇರಿಕಾ ದೇಶದಲ್ಲಿರುವುದು
(1) ಸಮಾಜವಾದ ವ್ಯವಸ್ಥೆ
(2) ಬಂಡವಾಳ ಶಾಹಿ ವ್ಯವಸ್ಥೆ
(3) ಸ್ಥಿರವಾದ ಬೆಳವಣಿಗೆ
(4) ಕೇಂದ್ರೀಕೃತ ಬೆಳವಣಿಗೆ

72. ಯೋಜನಾ ಆಯೋಗದ ಅಧ್ಯಕ್ಷರು
(1) ಪ್ರಧಾನ ಮಂತ್ರಿ
(2) ಹಣಕಾಸು ಮಂತ್ರಿ
(3) ವಾಣಿಜ್ಯ ಮಂತ್ರಿ
(4) ಕೈಗಾರಿಕಾ ಮಂತ್ರಿ

73. ಭಾರತದ ಇಂಧನ ಬಿಕ್ಕಟ್ಟಿನ ಕಾರಣ
(1) ಹಣದುಬ್ಬರ
(2) ಅವಮೌಲ್ಯೀಕರಣ
(3) ರಾಜಕೀಯ ಅಸ್ಥಿರತೆ
(4) 1973 ರ ತೈಲ ಬೆಲೆ ಏರಿಕೆ

74. ಒಂದೇ ಸಮನಾಗಿ ನಡೆಯುವ ಆರ್ಥಿಕ ಚಟುವಟಿಕೆ ತಿಳಿಸುವುದೇನೆಂದರೆ
(1) ಆರ್ಥಿಕ ಬೆಳವಣಿಗೆ
(2) ಆರ್ಥಿಕ ಪ್ರಗತಿ
(3) ವರ್ತುಲಾಕಾರದ ಹರಿವು
(4) ವಿಷವರ್ತುಲ



www.inyatrust.com

75. ಭೂ ಹಿಡುವಳಿಯ ಸ್ವರೂಪ ಹಾಗೂ ವಿನ್ಯಾಸ ಬದಲಾವಣೆಯು

(1) ಕೃಷಿ ಶ್ರಮಿಕರ ಸುಧಾರಣೆ

(2) ಭೂ ಸುಧಾರಣೆ

(3) ಸಾಮಾಜಿಕ ಸುಧಾರಣೆ

(4) ಹಸಿರು ಸುಧಾರಣೆ

76. ಬಹು-ನೂಲು ಒಪ್ಪಂದವನ್ನು ತೆಗೆದು ಹಾಕಿದ ವರ್ಷ

(1) ಫೆಬ್ರವರಿ, 2000

(2) ಜನವರಿ 15, 2006

(3) ಆಗಸ್ಟ್, 1991

(4) ಜನವರಿ 1, 2005

77. ನಾಬಾರ್ಡ್

(1) ಭಾರತೀಯ ರಿಜರ್ವ್ ಬ್ಯಾಂಕಿನ ಕವಲು

(2) ಸಹಕಾರಿ ಬ್ಯಾಂಕಿನ ಕವಲು

(3) ಗ್ರಾಮೀಣ ಮೂಲಸೌಕರ್ಯದ ಬ್ಯಾಂಕ್

(4) ಗ್ರಾಮೀಣ ಸಾಲದ ಅಪೆಕ್ಸ್ ಬ್ಯಾಂಕ್

78. ಭಾರತದ ಇಂಧನ(energy)ದ ಮುಖ್ಯವಾದ ಮೂಲವೆಂದರೆ

(1) ತೈಲ (2) ಸೌರ ಶಕ್ತಿ

(3) ಕಲ್ಲಿದ್ದಲು (4) ವಿದ್ಯುಚ್ಛಕ್ತಿ

79. ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತಂದ ವರ್ಷ

(1) 1991 (2) 1996

(3) 2000 (4) 1990

80. ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆಗೊಂಡ ವರ್ಷ

(1) 2000 (2) 1995-96

(3) 2005 (4) 2011-12

81. ಅರ್ಥಶಾಸ್ತ್ರದ ಕ್ಷೇಮಾಭಿವೃದ್ಧಿ ವ್ಯಾಖ್ಯೆ ನೀಡಿದವರು

(1) ಆಲ್ಫ್ರೆಡ್ ಮಾರ್ಷಲ್

(2) ಎಲ್. ರಾಬಿನ್ಸ್

(3) ಜೆ.ಎಮ್. ಕೇನ್ಸ್

(4) ಜೆ.ಎಸ್. ಮಿಲ್

82. ಅರ್ಥ ಶಾಸ್ತ್ರದ ಧನಾತ್ಮಕ ವಿಶ್ಲೇಷಣೆ

(1) ಉಪಯೋಗವಿಲ್ಲ

(2) ವೈಜ್ಞಾನಿಕ ಅರ್ಥಶಾಸ್ತ್ರ

(3) ಅರ್ಥಶಾಸ್ತ್ರದ ಕಲೆ

(4) ರೂಢಿಯಲ್ಲಿ ಇಲ್ಲ

83. ಅಂಶೀಯ ವೆಚ್ಚದಲ್ಲಿ ಒಟ್ಟು ನಿವ್ವಳ ರಾಷ್ಟ್ರೀಯ ಉತ್ಪನ್ನ ಯಾವುದಕ್ಕೆ ಸಮಾನ ಎಂದರೆ

(1) ನಿವ್ವಳ ರಾಷ್ಟ್ರೀಯ ಉತ್ಪನ್ನ ಮಾರುಕಟ್ಟೆ ಬೆಲೆಯಲ್ಲಿ-ಪರೋಕ್ಷ ತೆರಿಗೆ + ಸಹಾಯ ಧನ

(2) ಒಟ್ಟು ನಿವ್ವಳ ರಾಷ್ಟ್ರೀಯ ಉತ್ಪನ್ನ + ಸಹಾಯ ಧನ

(3) ಒಟ್ಟು ರಾಷ್ಟ್ರೀಯ ಉತ್ಪನ್ನ – ಸಹಾಯ ಧನ

(4) ಒಟ್ಟು ರಾಷ್ಟ್ರೀಯ ಉತ್ಪನ್ನ – ಪರೋಕ್ಷ ತೆರಿಗೆ

84. ರಾಷ್ಟ್ರೀಯ ನಿಜ (ಚೊಕ್ಕ) ಆದಾಯವನ್ನು ತಿಳಿಸುವುದು

(1) ಸಾಮಾನ್ಯ ಬೆಲೆಯ ಮಟ್ಟದಲ್ಲಿ ಅಲ್ಲ

(2) ಸಾಮಾನ್ಯ ಬೆಲೆಯ ಮಟ್ಟವನ್ನು ಗಮನದಲ್ಲಿ-ಟ್ಟುಕೊಂಡು

(3) ಹಣದ ಆದಾಯದ ರೂಪದಲ್ಲಿ

(4) ಭೌತಿಕ ಕ್ಷೇಮಾಭಿವೃದ್ಧಿ ರೂಪದಲ್ಲಿ

85. ಆಡಂಸ್ಮಿತ್‌ರವರ 'ರಾಷ್ಟ್ರದ ಸಂಪತ್ತು' ಪ್ರಕಟಣೆಗೊಂಡ ವರ್ಷ

(1) 1976 (2) 1776

(3) 1896 (4) 1820



www.inyatrust.com

86. ಪಂಚಾಯತ್ ರಾಜ್ಯವು ಈ ಸಿದ್ಧಾಂತದ ಆಡಿಪಾಯದಲ್ಲಿದೆ

(1) ಪ್ರಜಾಪ್ರಭುತ್ವ ವಿಕೇಂದ್ರೀಕರಣ

(2) ಸಮುದಾಯದ ಸಹಕಾರ ಮತ್ತು ಅಭಿವೃದ್ಧಿ

(3) ಸರಕಾರದಲ್ಲಿ ಜನಗಳ ಭಾಗವಹಿಸುವಿಕೆ

(4) ಉದಾರ ತತ್ವಗಳು

87. ಸಚಿವ ಸಂಪುಟದ ಸದಸ್ಯರುಗಳ ವೇತನ ಮತ್ತು ಭತ್ಯಗಳು ಇವರಿಂದ ನಿರ್ಧರಿಸಲ್ಪಡುತ್ತವೆ

(1) ರಾಷ್ಟ್ರಪತಿಗಳಿಂದ

(2) ಪ್ರಧಾನಮಂತ್ರಿಗಳೊಡನೆ ಸಮಾಲೋಚಿಸಿದ ಸಂಸತ್‌ನಿಂದ

(3) ಕಾಲಕಾಲಕ್ಕೆ ಸಂಸತ್‌ನಿಂದ

(4) ಪ್ರಧಾನ ಮಂತ್ರಿಗಳಿಂದ

88. ಭಾರತ ಸಂವಿಧಾನ ರಚಿಸಿದ ಕರಡು ಸಮಿತಿಯನ್ನು ಭಾರತ ಸಂವಿಧಾನ ಸಭೆಯು ನೇಮಕ ಮಾಡಿದ್ದು ______ ರಂದು

(1) ಜುಲೈ 18, 1947

(2) ಆಗಸ್ಟ್ 29, 1947

(3) ನವಂಬರ್ 26, 1949

(4) ಜನವರಿ 26, 1950

89. ಕೆಳಗಿನ ಯಾವ ಒಂದು ಆಜ್ಞಾಪತ್ರದ (ರಿಟ್) ವಾಸ್ತವ ಅರ್ಥ "ನಾವು ಆಜ್ಞಾಪಿಸುತ್ತೇವೆ" (we command) ಆಗಿದೆ ?

(1) ಹೇಬಿಯಸ್ ಕಾರ್ಪಸ್

(2) ಮ್ಯಾಂಡಮಸ್

(3) ಕೋ-ವಾರೆಂಟೊ

(4) ಸಟಿಯಾರಾರಿ

90. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

(1) ಪ್ರಧಾನಮಂತ್ರಿ ಮತ್ತು ರಾಜ್ಯಗಳ ಮುಖ್ಯಮಂತ್ರಿಗಳನ್ನು

(2) ಪ್ರಧಾನಮಂತ್ರಿ, ಅರ್ಥಸಚಿವರು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು.

(3) ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳು

(4) ಪ್ರಧಾನಮಂತ್ರಿ, ಲೋಕಸಭೆಯ ಅಧ್ಯಕ್ಷರು ಹಾಗೂ ರಾಜ್ಯಸಭೆಯ ಉಪಾಧ್ಯಕ್ಷರು.

91. 1975 ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲು ಕಾರಣ

(1) ಆಂತರಿಕ ತೊಂದರೆಗಳು

(2) ಚೀನಿಯರ ಆಕ್ರಮಣ

(3) ಪಾಕ್ ಆಕ್ರಮಣ

(4) ಹಣಕಾಸಿನ ಬಿಕ್ಕಟ್ಟು

92. ಅಂತರರಾಷ್ಟ್ರೀಯ ಕಾರ್ಮಿಕರ ಸಂಸ್ಥೆಯ ಕೇಂದ್ರ ಕಛೇರಿ ಇರುವುದು ಇಲ್ಲಿ -

(1) ಪ್ಯಾರಿಸ್

(2) ನ್ಯೂಯಾರ್ಕ್

(3) ಜಿನೇವಾ

(4) ರೋಮ್



www.inyatrust.com

**93.** ಆಗ್ನೇಯ ಏಷಿಯಾ ಪ್ರಾದೇಶಿಕ ಸಹಕಾರ ಸಂಸ್ಥೆಯ ಪ್ರಥಮ ಸಭೆಯು ನಡೆದದ್ದು

(1) ಬೆಂಗಳೂರಿನಲ್ಲಿ

(2) ಡಾಕಾದಲ್ಲಿ

(3) ಖಟ್ಮಂಡುವಿನಲ್ಲಿ

(4) ಕೊಲೊಂಬೋವಿನಲ್ಲಿ

**94.** ಕರ್ನಾಟಕದ ಈಗಿನ ಕಾನೂನು ಮಂತ್ರಿಗಳು

(1) ಶ್ರೀ ವೀರಪ್ಪ ಮೊಯ್ಲಿ

(2) ಶ್ರೀ ಅಶೋಕ್

(3) ಶ್ರೀ ಸುರೇಶ್ ಕುಮಾರ್

(4) ಶ್ರೀ ರಾಂದಾಸ್

**95.** ಭಾರತೀಯ ರಿಸರ್ವ್ ಬ್ಯಾಂಕ್ ಅನ್ನು ಸ್ಥಾಪಿಸಿದ ಶಾಸನ

(1) 1947 ರ ಭಾರತ ಸ್ವಾತಂತ್ರ್ಯ ಶಾಸನ

(2) 1935 ರ ಭಾರತ ಸರ್ಕಾರ ಶಾಸನ

(3) 1919 ರ ಭಾರತ ಸರ್ಕಾರ ಶಾಸನ

(4) 1784 ರ ಭಾರತ ಪಿಟ್ಸ್ ಇಂಡಿಯಾ ಶಾಸನ

**96.** ಸಂವಿಧಾನ ರಚನಾ ಕಾರ್ಯಕ್ಕೆ, ಸಂವಿಧಾನ ಸಭೆಯಲ್ಲಿ ಸೇರಿಸಲ್ಪಟ್ಟಿದ್ದ ಕರ್ನಾಟಕದ ಒಬ್ಬ ಪ್ರಮುಖ ಸದಸ್ಯರು

(1) ಬಿ.ಡಿ. ಜತ್ತಿ

(2) ಟಿ. ಸಿದ್ದಲಿಂಗಯ್ಯ

(3) ಡಿ.ಪಿ. ಕರಮಾರ್ಕರ್

(4) ಎಸ್. ಪಿ. ಮುಖರ್ಜಿ

**97.** ಕೆಳಗಿನ ಯಾವ ವಿಧಿಯಲ್ಲಿ "ಮೂಲಭೂತ ಕರ್ತವ್ಯ"ಗಳನ್ನು ಕಾಣಬಹುದು ?

(1) 50 (2) 51

(3) 52 (4) 53

**98.** "ಪ್ರಜಾಪ್ರಭುತ್ವವು ಹಲವರಿಂದಾದ ಸರ್ಕಾರ, ಒಬ್ಬರಿಂದಲ್ಲ" ಹಾಗೆಂದು ನಿರೂಪಿಸಿದವರು

(1) ಪೆರಿಕ್ಲಿಸ್

(2) ಅಬ್ರಹಾಂ ಲಿಂಕನ್

(3) ಜಾನ್ ಸ್ಟುಅರ್ಟ್ ಮಿಲ್

(4) ಜಾನ್ ಶೀಲಿ

**99.** "ಸ್ವರಾಜ್ಯ" ಎಂಬ ಕಲ್ಪನೆಯನ್ನು ಚೆನ್ನಾಗಿ ವಿವರಿಸಿರುವ ಪುಸ್ತಕ, "ನನ್ನ ಕನಸಿನ ಭಾರತ" (India of My Dream) ವನ್ನು ಬರೆದವರು

(1) ಅಬ್ದುಲ್ ಕಲಾಮ್

(2) ಜವಾಹರಲಾಲ್ ನೆಹರು

(3) ವಿನೋಬಾ ಭಾವೆ

(4) ಮಹಾತ್ಮ ಗಾಂಧೀಜಿ

**100.** ಭಾರತದ ವಿದೇಶಾಂಗ ನೀತಿಯು ಹಲವಾರು ಅಂಶಗಳ ಮೇಲೆ ಆಧಾರಿತವಾಗಿದೆ. ಅದರಲ್ಲಿ ಒಂದು ಇದಾಗಿದೆ.

(1) ಪಂಚಶೀಲ

(2) ಸತ್ಯಮೇವ ಜಯತೆ

(3) ವಸುಧೈವ ಕುಟುಂಬಕಂ

(4) ಬಾಳು, ಇತರರನ್ನು ಬಾಳಲು ಬಿಡು



www.inyatrust.com